## GOVERNMENT OF KARNATAKA

No.AHF 12 SFM 2007

Karnataka Government Secretariat
Vikasa Soudha
Bangalore, dated:30-07-2007

## NOTIFICATION

WHEREAS, the Government of Karnataka are convinced of the need to conserve fishery wealth and thereby to protect the interest of persons engaged in fishing, particularly those engaged in fishing using traditional fishing crafts;

AND WHEREAS, it is necessary to conserve the fishery wealth and regulate fishing on a scientific basis and it is also imperative to maintain Law and Order situation in the off-shore.

AND WHEREAS, there is a need to avoid loss of fishermen lives and their properties due to accident in the sea during squally weather conditions.

AND WHEREAS, the Hon'ble Supreme Court of India in its order dated 17-05-2007 in W.P. (C) No.393/2005 has ordered that the outer limit of the ban will be upto 31-07-2007 in accordance with Government of India Notification dated 10-04-2007.

NOW, THEREFORE, in exercise of the powers conferred under section 3 of the Karnataka Marine Fishing (Regulation) Act, 1986 and in supersession of the earlier Notification NO: AHF/98/SFM/2006 dated 28-07-2006, the Government of Karnataka hereby prohibits, until further orders, the operation of mechanised boats for fishing in any kind of nets/gears in the coasts of Karnataka as follows: -

In Dakshina Kannada and Udupi Districts the ban period will be in force for a period of 57 days from 15th June to 10th August (both days inclusive) of every year. However, during this ban period in the above two districts, multi-day deep sea trawlers are permitted for sea-fishing from 3rd August with a condition that they should return to harbours only after 10th August for unloading the fish catch.

-2-

In the Uttara Kannada District the ban period will be in force for a period of 47 days from 15th June to 31st July (both days inclusive) of every year;

However, during the respective ban periods in all the 3 coastal districts of Karnataka, only the traditional fishing crafts without motor or fitted with a motor of the capacity of upto 10 H.P. I.B.M. or O.B.M. for propulsion purpose only are permitted for sea-fishing.

The fishing vessels and fishermen who violate the above orders of Government will be liable for penalties as prescribed in the above Act and they will also become ineligible for getting the benefits of State Sales Tax exempt diesel and also refund of Central Excise Duty for a period of one year.

By order and in the name of the
Governor of Karnataka

(B.K. SRINIVASA MURTHY)
Under Secretary to Government
Animal Husbandry & Fisheries Department

To

1. The compiler, Karnataka Gazette, Bangalore for publication in the next issue of the Gazette.

Copy to

1) The Joint Secretary to Government of India, Ministry of Agriculture, Department of Animal Husbandry, Dairying and Fisheries, Krishi Bhavan, New Delhi-110 001.
2) The Fisheries Development Commissioner, Government of India, Ministry of Agriculture, Department of Animal Husbandry, Dairying and Fisheries, Krishi Bhavan, New Delhi-110 001.
3) Deputy Commissioner (Fisheries), Government of India, Ministry of Agriculture, Department of Animal Husbandry and Dairying, Krishi Bhavan, New Delhi-110 001.
4) The Director of Fisheries, Bangalore.
5) Deputy Commissioners of Dakshina Kannada, Udupi and Uttara Kannada Districts.
6) Project Coordinator, Malpe and Honnavar Harbours, Malpe.
7) Deputy Director of Fisheries, Mangalore/Karwar.
8) S.G File/Weekly Gazette/Spare Copies.

**Copy for information to:**

The Private Secretary to Hon'ble Minister for Fisheries and Muzrai.

# ಕರ್ನಾಟಕ ಸರ್ಕಾರ

ಸಂಖ್ಯೆ:ಪಸಂಮೀ 12 ಮೀಇಇ 2007

ಕರ್ನಾಟಕ ಸರ್ಕಾರದ ಸಚಿವಾಲಯ,<br>ವಿಕಾಸಸೌಧ,<br>ಬೆಂಗಳೂರು, ದಿನಾಂಕ:30-07-2007

## ಅಧಿಸೂಚನೆ

ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವವರ, ಅದರಲ್ಲೂ ವಿಶೇಷವಾಗಿ, ಸಾಂಪ್ರದಾಯಿಕ ದೋಣಿಯನ್ನು ಉಪಯೋಗಿಸಿ ಮೀನುಗಾರಿಕೆ ಕೈಗೊಳ್ಳುವವರ ಹಿತಾಸಕ್ತಿಯನ್ನು ಕಾಪಾಡಲು ಮತ್ಸ್ಯ ಸಂಪತ್ತನ್ನು ಸಂರಕ್ಷಿಸುವ ಅವಶ್ಯಕತೆಯಿರುವುದೆಂದು ಕರ್ನಾಟಕ ಸರ್ಕಾರವು ಮನಗಂಡಿರುವ ಕಾರಣದಿಂದಾಗಿ;

ಮೀನುಗಾರಿಕೆ ಸಂಪತ್ತನ್ನು ಸಂರಕ್ಷಿಸುವ ಅವಶ್ಯಕತೆಯಿರುವುದರಿಂದ, ವೈಜ್ಞಾನಿಕ ರೀತಿಯಲ್ಲಿ ಮೀನುಗಾರಿಕೆ ಕೈಗೊಳ್ಳಲು ನಿಯಂತ್ರಿಸಬೇಕಾಗಿರುವುದಲ್ಲದೆ ಮೇಲಾಗಿ ಕಡಲಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಅವಶ್ಯಕತೆ ಇದೆಯೆಂಬ ಕಾರಣದಿಂದಾಗಿ;

ಕಡಲಲ್ಲಿ ವಾತಾವರಣದ ವೈಪರೀತ್ಯದಿಂದಾಗಿ ಮೀನುಗಾರರ ಜೀವಕ್ಕೆ ಮತ್ತು ಆಸ್ತಿಗಳಿಗೆ ಸಂಭವಿಸುವ ಅಪಘಾತಗಳಿಂದ ಉಂಟಾಗಬಹುದಾದ ನಷ್ಟವನ್ನು ತಪ್ಪಿಸಬೇಕೆಂಬ ಕಾರಣದಿಂದಾಗಿ;

ಭಾರತದ ಮಾನ್ಯ ಸರ್ವೋಚ್ಛ ನ್ಯಾಯಾಲಯವು ರಿಟ್ ಮೊಕದ್ದಮೆ ಸಂಖ್ಯೆ:393/2005ರಲ್ಲಿ ದಿನಾಂಕ:17-05-2007ರಂದು ನೀಡಿರುವ ಆದೇಶದಲ್ಲಿ ಭಾರತ ಸರ್ಕಾರದ ದಿನಾಂಕ:10-04-2007ರ ಅಧಿಸೂಚನೆಯಲ್ಲಿನಂತೆ ನಿಷೇಧಿತ ಅವಧಿಯ ಕೊನೆಯ ದಿನಾಂಕವನ್ನು ದಿನಾಂಕ:31-07-2007ಕ್ಕೆ ನಿಗದಿಪಡಿಸಿ ಆದೇಶಿಸಿರುವ ಕಾರಣದಿಂದಾಗಿ;

ಕರ್ನಾಟಕ ಕರಾವಳಿ ಮೀನುಗಾರಿಕೆ (ನಿಯಂತ್ರಣ) ಕಾಯಿದೆ 1986ರ ನಿಯಮ 3ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮತ್ತು ಈ ದಿಸೆಯಲ್ಲಿ ಈ ಹಿಂದೆ ಹೊರಡಿಸಲಾಗಿದ್ದ ಅಧಿಸೂಚನೆಗಳ 'ಸಂಖ್ಯೆ:ಪಸಂಮೀ/98/ಮೀಇಇ/2006 ದಿನಾಂಕ:28-07-2006ನ್ನು ರದ್ದುಗೊಳಿಸಿ ಕರ್ನಾಟಕದ ಕರಾವಳಿಯಲ್ಲಿ ಯಾವುದೇ ಬಲೆಗಳನ್ನು/ಸಾಧನಗಳನ್ನು ಉಪಯೋಗಿಸಿ ಮೀನುಗಾರಿಕೆಗಾಗಿ ಯಾಂತ್ರೀಕ ದೋಣಿಗಳ ಬಳಕೆಯನ್ನು ಮುಂದಿನ ಆದೇಶದವರೆಗೆ ಕೆಳಕಂಡಂತೆ ನಿಷೇಧಿಸಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಿಷೇಧಿತ ಅವಧಿಯು ಜೂನ್ 15 ರಿಂದ ಪ್ರಾರಂಭಗೊಂಡು ಆಗಸ್ಟ್ 10 ರವರೆಗೆ (ಎರಡು ದಿನಗಳು ಸೇರಿ) ಪ್ರತಿವರ್ಷ ಒಟ್ಟು 57 ದಿವಸಗಳ ಅವಧಿಗೆ ಜಾರಿಯಲ್ಲಿರುತ್ತದೆ. ಆದಾಗ್ಯೂ, ಈ ಎರಡು ಜಿಲ್ಲೆಗಳಲ್ಲಿನ ಸದರಿ ನಿಷೇಧಿತ ಅವಧಿಯಲ್ಲಿ ಆಳ ಸಮುದ್ರದ ಬಹುದಿನಗಳ ಮೀನುಗಾರಿಕೆ ದೋಣಿಗಳು (ಮಲ್ಟಿಡೇ ಡೀಪ್ ಸೀ ಟ್ರಾಲರ್ಸ್) ಆಗಸ್ಟ್ 3 ರಿಂದ ಕರಾವಳಿ ಮೀನುಗಾರಿಕೆಗಾಗಿ ತೆರಳಲು ಸದರಿ ದೋಣಿಗಳು ಹಿಡಿದ ಮೀನನ್ನು ಇಳಿಸಲು ಆಗಸ್ಟ್ 10ರ ನಂತರವೇ ಬಂದರುಗಳಿಗೆ ಹಿಂದಿರುಗತಕ್ಕದ್ದೆಂಬ ನಿಬಂಧನೆಯ ಮೇರೆಗೆ ಅನುಮತಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ನಿಷೇಧಿತ ಅವಧಿಯು ಜೂನ್ 15 ರಿಂದ ಪ್ರಾರಂಭಗೊಂಡು ಜುಲೈ 31ರವರೆಗೆ (ಎರಡು ದಿನಗಳು ಸೇರಿ) ಪ್ರತಿವರ್ಷ ಒಟ್ಟು 47 ದಿವಸಗಳ ಅವಧಿಗೆ ಜಾರಿಯಲ್ಲಿರುತ್ತದೆ.

ಆದಾಗ್ಯೂ, ಮೇಲ್ಕಾಣಿಸಿದ ನಿಷೇಧಿತ ಅವಧಿಗಳಲ್ಲಿ ಕರ್ನಾಟಕದ ಎಲ್ಲಾ 3 ಕರಾವಳಿ ಜಿಲ್ಲೆಗಳಲ್ಲಿ ಕೇವಲ ದೋಣಿಯನ್ನು ಸಾಗಿಸುವ ಉದ್ದೇಶಕ್ಕಾಗಿಯೇ 10 ಅಶ್ವಶಕ್ತಿಯವರೆಗಿನ ಸಾಮರ್ಥ್ಯದ ಐ.ಬಿ.ಎಂ. ಅಥವಾ ಓ.ಬಿ.ಎಂ. ಯಂತ್ರವನ್ನು ಅಳವಡಿಸಿದ ಅಥವಾ ಅಳವಡಿಸದಿರುವ ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳು ಕರಾವಳಿ ಮೀನುಗಾರಿಕೆಯನ್ನು ಕೈಗೊಳ್ಳಲು ಅನುಮತಿಸಿದೆ.

ಸರ್ಕಾರದ ಈ ಆದೇಶವನ್ನು ಉಲ್ಲಂಘಿಸುವ ಮೀನುಗಾರಿಕೆ ದೋಣಿಗಳು ಮತ್ತು ಮೀನುಗಾರರು ಮೇಲ್ಕಾಣಿಸಿದ ಕಾಯಿದೆಯಲ್ಲಿ ವಿಧಿಸಲಾಗಿರುವ ದಂಡನೆಗಳಿಗೆ ಹೊಣೆಯಾಗುವುದಲ್ಲದೆ ಒಂದು ವರ್ಷದ ಅವಧಿಗೆ ರಾಜ್ಯ ಮಾರಾಟಕರ ರಹಿತ ಡೀಸೆಲ್ ಪಡೆಯಲು ಮತ್ತು ಕೇಂದ್ರ ಅಬ್ಕಾರಿ ತೆರಿಗೆಯ ಮರುಪಾವತಿಯನ್ನು ಪಡೆಯಲು ಅನರ್ಹರಾಗುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಕೆ. ಶ್ರೀನಿವಾಸ ಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

ಇವರಿಗೆ:

1) ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು - ಮುಂದಿನ ಸಂಚಿಕೆಯಲ್ಲಿ ಈ ಅಧಿಸೂಚನೆಯನ್ನು ಮುದ್ರಿಸಲು ಕೋರಿದೆ.

ಪ್ರತಿ:

1) ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಕೃಷಿ ಮಂತ್ರಾಲಯ, ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆ, ಕೃಷಿ ಭವನ, ನವದೆಹಲಿ-110 001.
2) ಮೀನುಗಾರಿಕೆ ಅಭಿವೃದ್ಧಿ ಆಯುಕ್ತರು, ಭಾರತ ಸರ್ಕಾರ, ಕೃಷಿ ಮಂತ್ರಾಲಯ, ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆ, ಕೃಷಿ ಭವನ, ನವದೆಹಲಿ-110 001.
3) ಉಪ ಆಯುಕ್ತರು (ಮೀನುಗಾರಿಕೆ), ಭಾರತ ಸರ್ಕಾರ, ಕೃಷಿ ಮಂತ್ರಾಲಯ, ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆ, ಕೃಷಿ ಭವನ, ನವದೆಹಲಿ-110 001.
4) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
5) ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ/ಉಡುಪಿ ಜಿಲ್ಲೆ/ಉತ್ತರ ಕನ್ನಡ ಜಿಲ್ಲೆ.
6) ಯೋಜನಾ ಸಮನ್ವಯಾಧಿಕಾರಿ, ಮಲ್ಪೆ ಮತ್ತು ಹೊನ್ನಾವರ ಮೀನುಗಾರಿಕೆ ಬಂದರು, ಮಲ್ಪೆ.
7) ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು/ಕಾರವಾರ.
8) ಶಾಖಾ ರಕ್ಷಾ ಕಡತ/ವಾರ ಪತ್ರಿಕೆ/ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:

ಮಾನ್ಯ ಮೀನುಗಾರಿಕೆ ಹಾಗೂ ಮುಜರಾಯಿ ಸಚಿವರ ಆಪ್ತ ಕಾರ್ಯದರ್ಶಿಗಳು.